**ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ**

ಸಿ. ಸಿ. ಸಂಖ್ಯೆಃ 929/2024

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿತರು** |
|---|---|---|
| ಸರ್ಕಾರದ ಪರವಾಗಿ,<br>ಗ್ರಾಮಾಂತರ ಪೊಲೀಸ್ ಠಾಣೆ,<br>ಭದ್ರಾವತಿ | | ಶ್ರೀ ರಾಮಕೃಷ್ಣ ಮತ್ತು ಇನ್ನೊಬ್ಬರು |

**:: ದೋಷಾರೋಪಣೆ ::**

**ಶ್ರೀ. ಟಿ. ಶ್ರೀಕಾಂತ್,** ಬಿ.ಎ.ಎಲ್., ಎಲ್.ಎಲ್.ಬಿ., **ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಭದ್ರಾವತಿ, ಅದ ನಾನು ನಿಮ್ಮ ಮೇಲೆ ಅಂದರೆಃ**

1. ಶ್ರೀ ರಾಮಕೃಷ್ಣ
ಬಿನ್ ತಿಮ್ಮಯ್ಯ,
ವಯಸ್ಸು 71 ವರ್ಷ,
ವಾಸಃ 6 ನೇ ತಿರುವು,
ಹೊಸ ಸಿದ್ದಾಪುರ,
ಭದ್ರಾವತಿ.

2. ಶ್ರೀ ಶರತ್ ಗೌಡ
ಬಿನ್ ರಾಮಕೃಷ್ಣ,
ವಯಸ್ಸು 35 ವರ್ಷ,
ವಾಸಃ ವೀರಾಪುರ,
ಸಿರಿಯೂರು ಅಂಚೆ,
ಭದ್ರಾವತಿ.

**ಈ ಕೆಳಗಿನಂತೆ ದೋಷಾರೋಪಣೆ ಹೊರಸಿದ್ದೇನೆಃ-**

ಮೊದಲನೆಯದಾಗಿ, ದಿನಾಂಕಃ 21/10/2022 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಭದ್ರಾವತಿ ತಾಲ್ಲೂಕು, ಸಿರಿಯೂರು ವೀರಾಪುರ ಗ್ರಾಮದ ಸರ್ವೆ ನಂ. 224/ಪಿ ರ ಜಮೀನಿನಲ್ಲಿರುವ ಸಾಕ್ಷಿ-1 ರವರ ಮನೆಯ ಮುಂಭಾಗ ಕಲ್ಲು ಕಂಬಗಳ ಸಾಲಿನಲ್ಲಿ ಅಡಿಕೆ ಸಸಿಗಳನ್ನು ನೆಡುವ ವಿಚಾರದಲ್ಲಿ, 1 ಮತ್ತು 2 ನೇ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸಾಕ್ಷಿ-1 ಹಾಗೂ ಅವರ ಕುಟುಂಬದವರೊಂದಿಗೆ ಜಗಳ ತೆಗೆದು, ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಸಾರ್ವಜನಿಕ ನೆಮ್ಮದಿಗೆ ಭಂಗವನ್ನುಂಟು ಮಾಡಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 504 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 2 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಸದರಿ ಜಮೀನಿನ ಒಳಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 441 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 2 ನೇ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಸದರಿ ಜಮೀನಿನ ಕಲ್ಲುಕಂಬಗಳನ್ನು ಜೆ.ಸಿ.ಬಿ. ಮೂಲಕ ತೆರವುಗೊಳಿಸುವುದಾಗಿ ಹಾಗೂ ಮನೆ ಮತ್ತು ಆಸ್ತಿಪಾಸ್ತಿಗೆ ಹಾನಿವುಂಟು ಮಾಡುವುದಾಗಿ ಬೆದರಿಕೆ ಹಾಕಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 503 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ನಾಲ್ಕನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸಾಕ್ಷಿ-1 ಹಾಗೂ ಅವರ ಕುಟುಂಬದವರಿಗೆ ರವರಿಗೆ ಜೀವ ಭಯ ಉಂಟು ಮಾಡುವ ಉದ್ದೇಶದಿಂದ ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ

ಸಂಹಿತೆ ಕಲಂ 506 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸಾಕ್ಷಿ-1, 4 ಮತ್ತು 5 ರವರು ಆರೋಪಿತರಿಗೆ ಕಲ್ಲು ಕಂಬದಿಂದ 2 ಅಡಿ ಅಂತರದಲ್ಲಿ ಅಡಿಕೆ ಸಸಿಗಳನ್ನು ನೆಡುವಂತೆ ಹೇಳಿದರೂ ಸಹ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಕಲ್ಲು ಕಂಬಗಳ ಸಾಲಿನಲ್ಲಿ ಅಡಿಕೆ ಸಸಿಗಳನ್ನು ನೆಟ್ಟಿ, ಕ್ರಿಮಿನಲ್ ಅಪರಾಧಗಳನ್ನು ಮಾಡಲು ಪ್ರಯತ್ನಿಸಿರುತ್ತೀರಿ ಎಂದು, ಆ ಮೂಲಕ 1860 ರ ಭಾರತೀಯ ದಂಡ ಸಂಹಿತೆ ಕಲಂ 511 ಸಹ ಕಲಂ 34 ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲಿನ ಆರೋಪಕ್ಕೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರಶ್ನೆ.1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು ನಿಮಗೆ ಅರ್ಥವಾಗಿದೆಯೇ?

ಉತ್ತರಃ ಆ 1) ಆ 2)

ಪ್ರಶ್ನೆ.2: ನೀವು ಆರೋಪಗಳನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಚಿಸುತ್ತಿರೋ.?

ಉತ್ತರಃ ಆ 1) ಆ 2)

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ, ತಿಳಿಸಿ ಹೇಳಿದ ನಂತರ ಆತ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ

(ಟಿ.ಶ್ರೀಕಾಂತ್ )
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು ಭದ್ರಾವತಿ.